ಆ) ಹಾಗಿದ್ದಲ್ಲಿ ಸದರಿ ತಾಲ್ಲೂಕಿನಲ್ಲಿ ಕೂಡಲೇ ಅಗ್ನಿ ಶಾಮಕ ದಳ ತೆರೆಯುವಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ೇ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಮಂತ್ರಿಗಳು) :–

ಆ) ಹೌದು.

ಆ) ಹರಪನಹಳ್ಳಿಯಲ್ಲಿ ಅಗ್ನಿ ಶಾಮಕ ಠಾಣೆಯನ್ನು 1990–91ನೇ ಆರ್ಥಿಕ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಹೆಚ್. ಯಂಕಾನಾಯಕ :– ಸ್ವಾಮಿ, ನಾನು ಇಷ್ಟು ವರ್ಷಗಳಿಂದ ಅಸೆಂಬ್ಲಿಯಲ್ಲಿದ್ದು ಹೇಳುತ್ತಾ ಬಂದಿದ್ದೇನೆ. ನಮ್ಮ ಹರಪನಹಳ್ಳಿ, ಸುತ್ತ ಮುತ್ತಲ ಪಟ್ಟಣಗಳಿಂದ ಕಡಿಮೆ ಎಂದರೆ ಸರಾಸರಿ 50 ಕಿ. ಮೀ. ಅಂತರದಲ್ಲಿದೆ. ದಾವಣಗೆರೆಯಿಂದ 40–45 ಕಿ. ಮೀ. ದೂರದಲ್ಲಿದೆ. ಹಾಗೆಯೇ ಹಡಗಲಿ, ಹೂವಿನಹಡಗಲಿಗಳಿಂದಲೂ ದೂರದಲ್ಲಿದೆ ಅಂದರೆ ಹರಪನಹಳ್ಳಿ ಮಧ್ಯಭಾಗದಲ್ಲಿದೆ. ಆದ್ದರಿಂದ ಹರಪನಹಳ್ಳಿಯಲ್ಲಿ ಒಂದು ಅಗ್ನಿಶಾಮಕ ಸ್ಥಾಪನೆ ಮಾಡಬೇಕೆಂದು ನಾವು ಪ್ರಾರ್ಥನೆ ಮಾಡಿಕೊಂಡೆವು. ಆದ್ದರಿಂದ ಇದನ್ನು ಮಂಜೂರು ಮಾಡಿಕೊಡಬೇಕು. ಈಗ 1990–91 ನೇ ಆರ್ಥಿಕ ಸಾಲಿನಲ್ಲಿ ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದಿದ್ದೀರಿ. ಆದ್ದರಿಂದ ಅದನ್ನು ಯಾವಾಗ ಪ್ರಾರಂಭ ಮಾಡುವಿರಿ ಎನ್ನುವುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ :– 1990–91 ರಲ್ಲಿ ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ವಿಚಾರ ಸರ್ಕಾರದ ತೀವ್ರತರ ಪರಿಶೀಲನೆಯಲ್ಲಿದೆ, ಸರ್ಕಾರ ಮಾಡುತ್ತದೆ.

ವಿಷಯ :– ಕೇಂದ್ರ ಕಾರಾಗೃಹದ ಬಂದಿಗಳಿಗೆ ನೀಡುವ ಆಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 289 (1126)

ಶ್ರೀ ಡಿ. ಪಲಗೇಗೌಡ (ಪಾಂಡವಪುರ) :– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಕೇಂದ್ರ ಕಾರಾಗೃಹದ ಬಂದಿಗಳಿಗೆ ನೀಡುವ ಆಹಾರಕ್ಕೆ ಸಂಬಂಧಿಸಿದ ದಿನಸಿ ಸಾಮಗ್ರಿಗಳನ್ನು ಖಾಸಗಿ ವ್ಯಕ್ತಿಯೊಬ್ಬರಿಂದ ಖರೀದಿಸುತ್ತಿರುವುದು ನಿಜವೇ ?

ಆ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಹಾಗೂ ಜನತಾ ಬಜಾರಗಳಿಂದ ಸದರಿ ದಿನಸಿ ಗಳನ್ನು ಖರೀದಿಸಲು ಈ ಹಿಂದೆ ಹೊರಡಿಸಿದ್ದ ಆದೇಶವನ್ನು ತಡೆಹಿಡಿದಿರುವುದು ನಿಜವೇ ?

ಇ) ರಾಜ್ಯದ ಕಾರಾಗೃಹಗಳಿಗೆ ಸರಬರಾಜಾಗುವ ದಿನಸಿಗಳನ್ನು ಓಪನ್ ಟೆಂಡರ್ ಮೂಲಕ ಖರೀದಿಸದೆ ಇರಲು ಕಾರಣಗಳೇನು ? (ವಿವರವಾದ ಕಾರಣಗಳನ್ನು ಒದಗಿಸುವುದು)

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಇಲ್ಲ.

ಆ) ಇಲ್ಲ.

ಇ) 1) ನಿಯಂತ್ರಿತ ಆಹಾರ ಪದಾರ್ಥಗಳಾದ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಮುಂತಾದವುಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಪರವಾನಿಗೆ ಮೇರೆಗೆ ಖರೀದಿಸಲಾಗುತ್ತಿದೆ.

2) ಉಳಿದ ಆಹಾರ ಪದಾರ್ಥಗಳು ಹಾಗೂ ಇತರೆ ವಸ್ತುಗಳನ್ನು

ಅ) ಸ್ಥಳೀಯ ಗ್ರಾಹಕರ ಬಳಕೆದಾರರ ಸಹಕಾರ ಸಂಘ, ಅಥವಾ

ಆ) ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ಅಥವಾ

ಇ) ಜಿಲ್ಲಾ ಸಹಕಾರ ಸಗಟು ಮಹಾಮಂಡಳಿಗಳಿಂದ ಖರೀದಿಸಲಾಗುತ್ತಿದೆ.

3) ಬೆಂಗಳೂರು ಕೇಂದ್ರ ಕಾರಾಗೃಹ ಕುರಿತಂತೆ 1990–91 ನೇ ಸಾಲಿಗೆ

ಅ) ನಿಯಂತ್ರಿತ ಆಹಾರ ಪದಾರ್ಥಗಳನ್ನು ಪರವಾನಗಿ ಮೇಲೆ ಖರೀದಿಸಲಾಗುತ್ತಿದೆ.

ಆ) ಇತರೆ ಆಹಾರ ಪದಾರ್ಥಗಳನ್ನು ಸದರಿ ಸರ್ಕಾರಿ ಆದೇಶದ ಪ್ರಕಾರ ವೀರಶೈವ ಸಹಕಾರ ಸಂಘ ನಿಯಮಿತ (ಕೇಂದ್ರ ಸಹಕಾರ ಸಗಟು ಮಳಿಗೆ) ಬೆಂಗಳೂರು ಇವರಿಂದ ಖರೀದಿಸಲಾಗುತ್ತಿದೆ.

ಇ) ಮಾಂಸ ಮತ್ತು ಕೋಳಿ ಮೊಟ್ಟೆಯನ್ನು ಕಂಟೋನ್‌ಮೆಂಟ್ ಬುಚರ್ಸ್, ಸಪ್ಲೈಯರ್ಸ್, ಕೋ–ಆಪರೇಟಿವ್ ಸೊಸೈಟಿ ಇವರಿಂದ ಪಡೆಯಲಾಗುತ್ತಿದೆ.

ಈ) ಸಹಕಾರಿ ಸಂಘಗಳು ಸರಬರಾಜಿನ ಬಗ್ಗೆ ಮುಂದೆ ಬಾರದಿದ್ದ ಸಂದರ್ಭಗಳಲ್ಲಿ ಓಪನ್ ಟೆಂಡರ್ ಮೂಲಕ ಸರಬರಾಜು ಪಡೆಯಲಾಗುತ್ತಿದೆ.

ಶ್ರೀ ಡಿ. ಹಲಗೇಗೌಡ :– ಮಾನ್ಯ ಮಂತ್ರಿಗಳು ಉತ್ತರದಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹದ ಬಂಧಿಗಳಿಗೆ ನೀಡುವ ಆಹಾರಕ್ಕೆ ಸಂಬಂಧಿಸಿದ ದಿನಸಿ ಸಾಮಗ್ರಿಗಳನ್ನು ಸಹಕಾರ ಸಂಘಗಳು ಸರಬರಾಜು ಮಾಡಲು ಮುಂದೆ ಬರದೇ ಇದ್ದ ಕಾಲದಲ್ಲಿ ಖಾಸಗಿ ವ್ಯಕ್ತಿಗಳಿಂದ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದನ್ನೇ ಒಂದು ಕಾರಣ ಮಾಡಿಕೊಂಡು ಅಂದರೆ ಸಹಕಾರ ಸಂಘಗಳು ಸರಬರಾಜು ಮಾಡಲು ಮುಂದೆ ಬರುವುದಿಲ್ಲ ಎಂಬ ನೆಪವೊಡ್ಡಿ ಖಾಸಗಿ ವ್ಯಕ್ತಿಗಳಿಂದ ಹೆಚ್ಚು ಹಣ ಕೊಟ್ಟು ಕೊಂಡುಕೊಳ್ಳುವ ಯೋಜನೆ ಹಾಕಿಕೊಳ್ಳುತ್ತಿದ್ದಾರೆ. ಅದಕ್ಕೆ ಅವಕಾಶವಾಗದಂತೆ ಒಂದು ಸಹಕಾರ ಸಂಘ ಕೊಡದಿದ್ದರೆ ಮತ್ತೊಂದು ಸಂಘದಿಂದ ಬಳಕೆ ವಸ್ತುಗಳನ್ನು ತೆಗೆದುಕೊಂಡು ಸರಬರಾಜು ಮಾಡಲು ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಧರ್ಮಸಿಂಗ್ :– ಯಾವ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆಂದು ನನಗೆ ಅರ್ಥವಾಗಿದೆ. ಆದಕ್ಕಾಗಿ ನಾನು ಸಂಬಂಧಿಸಿದ ಅಧಿಕಾರಿಗಳೊಡನೆ ವಿವರವಾಗಿ ಮಾತನಾಡಿದ್ದೇನೆ. ಇಲ್ಲಿಯವರೆಗೆ ನಾವು ಖಾಸಗಿ ವ್ಯಕ್ತಿಗಳಿಂದ ಖರೀದಿಸುತ್ತಿಲ್ಲ. ಜನತಾ ಬಜಾರ್, ಕೋ–ಆಪರೇಟೀವ್ ಡಿಪಾರ್ಟಮೆಂಟ್ ಏನಿವೆ ಅದರಲ್ಲಿ ಮಾತ್ರ ಖರೀದಿಸುತ್ತಿದ್ದೇವೆ. ಆದರೂ ಕೂಡ ಹೋದ ಸಲ ಲೋಕಲ್ ಸಹಕಾರಿ ಸ್ಪೋರ್ಸ್ ಡಿಸ್ಟ್ರಿಕ್ಟ್‌ಹೋಲ್ ಸೇಲ್ ಕೋ–ಆಪ್‌ರೇಟೀವ್ ಸ್ಪೋರ್ಸ್ ಮತ್ತು ಕೋ–ಆಪ್‌ರೇಟಿವ್ ಫೆಡರೇಷನ್‌ನಿಂದ ಖರೀದಿ ಮಾಡಿದ್ದೆವು.

ಆದರೂ ಕೂಡ ನಾನು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಆದೇಶ ನೀಡಿದ್ದೇನೆ. ಮಲ್ಲೇಶ್ವರ ಸಹಕಾರ ಸಂಘ ಇದೆ, ರಾಜಾಜಿನಗರ ಸಹಕಾರ ಸಂಘ ಇದೆ. ವೀರಶೈವ ಸಹಕಾರ ಸಂಘ ಇದೆ. ಅಲ್ಲಿ ಕೊಟ್ಟಾಗ ಆ ಮೂರರಲ್ಲಿ ತಾರತಮ್ಯ ಬರುತ್ತದೆ. ಆದ್ದರಿಂದ ರೇಟ್ಸನ್ನು ಸ್ಕ್ರೂಟಿನಿ ಮಾಡಿಕೊಡಬೇಕೆಂದು ಆದೇಶ ಮಾಡಿದ್ದೇನೆ. ಇಲ್ಲಿಯವರೆಗೆ ಸರ್ಕಾರದವರು ಇಂಡಿವಿಜ್ಯುಯಲ್ ಯಾರಿಗೂ ಕೊಟ್ಟಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ :– ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ (ಸಿವಿಲ್) ಪ್ರಕರಣಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 282 (1154)

ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗಾ) :– ಮಾನ್ಯ ಕಾನೂನು, ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಸಿವಿಲ್ ಪ್ರಕರಣಗಳ ಸಂಖ್ಯೆ

ಆ) ಸರ್ಕಾರವು ಬಾಕಿ ಉಳಿದಿರುವ ಪ್ರಕರಣಗಳನ್ನು ವಿಲೇವಾರಿ ಮಾಡಲು ಕ್ರಮ ತೆಗೆದುಕೊಂಡಿದೆಯೇ ?

ಇ) ಹಾಗಾದರೆ, ಯಾವ ರೀತಿ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುತ್ತೀರಿ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಸಿವಿಲ್ ಪ್ರಕರಣಗಳ ಸಂಖ್ಯೆ ಕೆಳಕಂಡಂತೆ ಇದೆ.